## ಎಸ್. ಸೂರ್ಯಪ್ರಕಾಶ ಪಂಡಿತ್

ಮುಲ್ಲಾ ನಸ್ರುದ್ದೀನ್ ಕನಸೊಂದನ್ನು ಕಂಡ – ಯಾರೋ ಒಬ್ಬರು ಅವನಿಗೆ ನಾಣ್ಯಗಳನ್ನು ಕೊಡುತ್ತಿದ್ದಾರೆ. ಒಂದೊಂದಾಗಿ ಕೊಡುತ್ತಿದ್ದಾನೆ. ಹೀಗೆ ಒಂಬತ್ತು ನಾಣ್ಯಗಳನ್ನು ಕೊಟ್ಟಾಯಿತು. ಕೂಡಲೇ ದಾನಿ ಕೊಡುವುದನ್ನು ನಿಲ್ಲಿಸಿದ.

ನಸ್ರುದ್ದೀನ್ ಕನಸಿನಲ್ಲೇ ಜೋರಾಗಿ ಕೂಗಿದ: 'ನನಗೆ ಹತ್ತು ಬೇಕೇ ಬೇಕು!' ಅವನ ಕೂಗಿನಿಂದ ಅವನಿಗೇ ಎಚ್ಚರವಾಯಿತು!

ನಿದ್ರೆಯಿಂದ ಎಚ್ಚರವಾದ ಮೇಲೆ ನೋಡುತ್ತಾನೆ, ಒಂದು ನಾಣ್ಯವೂ ಇಲ್ಲ. ಕಣ್ಮುಚ್ಚಿ ಕುಳಿತ ನಸ್ರುದ್ದೀನ್ ಅಂಗಲಾಚಿದ: 'ಸರಿ, ಪರವಾಗಿಲ್ಲ, ನನಗೆ ಒಂಬತ್ತು ನಾಣ್ಯಗಳನ್ನೇ ಕೊಡು!'

★★★

ಈ ಕಥೆಯನ್ನು ಓದಿದ ಕೂಡಲೇ ನೆನಪಾಗುವುದು 'ತಿರುಕನ ಕನಸು' ಪದ್ಯ. ಕನ್ನಡಿಯ ಗಂಟಿನ ಕಥೆಯನ್ನು ಅದು ಚೆನ್ನಾಗಿ ವರ್ಣಿಸಿದೆ. ತುಂಬ ಪ್ರಸಿದ್ಧ ಪದ್ಯವಿದು:

ತಿರುಕನೋರ್ವನೂರಮುಂದೆ
ಮುರುಕು ಧರ್ಮಶಾಲೆಯಲ್ಲಿ
ಒರಗಿರುತ್ತಲೊಂದು ಕನಸ ಕಂಡನೆಂತೆನೆ ।
ಪುರದ ರಾಜ ಸತ್ತನವಗೆ
ವರ ಕುಮಾರರಿಲ್ಲದಿರಲು
ಕರಿಯ ಕೈಗೆ ಕುಸುಮಮಾಲೆಯಿತ್ತು ಪುರದೊಳು ॥
ನಡೆದು ಯಾರ ಕೊರಳಿನಲ್ಲಿ
ತೊಡರಿಸುವುದೊ ಅವರ ಪಟ್ಟ
ಕೊಡೆಯರನ್ನು ಮಾಳ್ವೆವೆಂದು ಬಿಟ್ಟರಲ್ಲಿಯೆ ।
ಒಡನೆ ತನ್ನ ಕೊರಳಿನಲ್ಲಿ
ತೊಡರಿಸಲ್ಕೆ ಕಂಡು ತಿರುಕ
ಪೊಡವಿಯಾಣ್ಮನಾದೆನೆಂದು ಹಿಗ್ಗುತಿರ್ದನು ॥

ಒಂದು ಊರಿನಲ್ಲಿ ತಿರುಕನೊಬ್ಬನಿದ್ದ. ಹಾಳುಬಿದ್ದ ಮಂಟಪದಲ್ಲಿ ವಾಸ ಮಾಡುತ್ತಿದ್ದ. ಕನಸನ್ನು ಕಾಣುವುದೇ ಅವನ ಉದ್ಯೋಗ! ಅಂದು ಅವನು ವಿಶೇಷ ಕನಸನ್ನೇ ಕಂಡ. ಆ ನಾಡಿನ ರಾಜ ಸತ್ತಿದ್ದಾನೆ. ಅವನಿಗೆ ಮಕ್ಕಳು ಇರಲಿಲ್ಲ. ಹೀಗಾಗಿ ರಾಜನನ್ನು ಆರಿಸುವ ಹೊಸ ದಾರಿಯನ್ನು ಮಂತ್ರಿಗಳು ಕಂಡುಕೊಂಡರು. ಪಟ್ಟದ ಆನೆಯ ಸೊಂಡಿಲಿಗೆ ಹೂವಿನ ಹಾರವನ್ನು ನೀಡುವುದು; ಅದು ಯಾರ ಕೊರಳಿಗೆ ಅದನ್ನು ಹಾಕುತ್ತದೆಯೋ ಅವನಿಗೇ ಸಿಂಹಾಸನ. ಆ ಆನೆ ಈ ತಿರುಕನಿಗೇ ಹಾರವನ್ನು ಹಾಕಿತು. ಪಕ್ಕದ ರಾಜ್ಯದ ರಾಜ ಅವನ ಮಗಳನ್ನು ಇವನಿಗೆ ಕೊಟ್ಟು ಮದುವೆಯನ್ನೂ ಮಾಡಿದ. ಈ 'ತಿರುಕ–ರಾಜ'ನ ಕುಟುಂಬ ಬೆಳೆಯಿತು. ಮಕ್ಕಳಾದರು; ಗಂಡು–ಹೆಣ್ಣು ಇಬ್ಬರೂ. ಹೆಂಡತಿ, ಮಕ್ಕಳು, ರಾಜ್ಯ – ಇಂಥ ಸುಖದಲ್ಲಿ ಮುಳುಗಿದ್ದಾನೆ. ಮಗಳಿಗೆ ಮದುವೆಯ ವಯಸ್ಸೂ ಬಂತು; ಮದುವೆ ನಿಶ್ಚಯವೂ

